## ಕಲ್ಪನೆ ಕಾವ್ಯ

# ಇನ್ನೂ ಹುಡುಕುವ

ಬದುಕು ಹುಡುಕುತ್ತಿದ್ದೇನೆ
ಅಲ್ಲಿ ಇಲ್ಲಿ ಎಲ್ಲೆಲ್ಲೂ
ರಾತ್ರಿಯಾದರೆ ಸಾಕು ಕಪ್ಪು ಕೌದಿಯಲ್ಲಿ ಮುದುರಿ
ಕನಸು ಕಾಣುತ್ತ
ನಡೆಯಲಾರದ್ದು, ನಡೆಯಬಾರದ ಘಟನೆ
ನಡೆಯುತ್ತದೆ
ಇದ್ದಕ್ಕಿದ್ದಂತೆ ಭಯಗೊಂಡು ಕಿರುಚಿ ಎಚ್ಚರಗೊಂಡು
ನನ್ನ ಸದ್ದಿಗೆ ನಾನೇ ಬೆಚ್ಚಿ
ಏನೂ ಇಲ್ಲದ ನಿರ್ವಾತದಲ್ಲಿ!
ಆದೆ ನಾ ಎಚ್ಚರ ನನಗೋ ಅಚ್ಚರಿ
ಬಡಿತವೊಂದೇ ಉಳಿಯುತ್ತದೆ ಗಂಟೆ ರಿಂಗಣದಂತೆ
ಕಣ್ಣತುಂಬ ಗಾಬರಿ ಅಂಟಂಟು
ಅದ ಒರೆಸುತ್ತ ಒರೆಸುತ್ತ ಬಾಯ ಕಟಬಾಯಿ ಹರಿದಿರುತ್ತೆ
ನನ್ನ ನಿದ್ರೆಯ ಲೋಕವ್ಯಾಪಾರವೇ ಇದೆಲ್ಲಾ!?

ಮತ್ತೆ ಮಲಗಿ
ಬೆಳಗ್ಗೆ ಇನ್ನಷ್ಟು ಹೆಚ್ಚು ಸ್ಪಷ್ಟ
ಎಲ್ಲವೂ
ಮುಗಿಸಿ ಹೊರನೋಡಿದರೆ!
ಬಣ್ಣ ಬಣ್ಣ ಬಳಿದಂತೆ
ಮುಗಿಲ ಮಂದಿರ ನಿಶ್ಯಬ್ದ ವ್ಯಾಪಾರವೇ ಹೌದು
ಕಾಣದಕೈಯ ಕೈವಾಡವೇ ಇದು
ನಡೆದೇ ಇದೆ ಇನ್ನೂ
ಬಾಲಕ ಓಡುತ್ತಾನೆ ಹನಿ ಉದುರಿ ಬೀಳುತ್ತಿರುವ
ಕ್ಯಾಚ್ ಹಿಡಿಯಲೆಂದು
ನಗು ಬುಗ್ಗೆಯೊಂದ ಮುಟ್ಟೆಲೆಂದು
ಯಾವುದು ಕೈಗೆ ಸಿಕ್ಕದೇ
ಯಾವುದು ಮುಗಿಯದೆ
ಉತ್ಸಾಹ ಖಾಲಿಯಾಗದೆ
ಕಾಲುಗಳು ಸೋಲು ಒಪ್ಪಿಕೊಳ್ಳದೆ
ಮುದುಕ ಹುಡುಗುತನ ತೋರ್ಪಂತೆ
ಇರುವನು ಇನ್ನೂ

**ನಾಗಣ್ಣ ಕಿಲಾರಿ**

# ನಂಬಬೇಡ ಪೋರಿ

ಅದು ನೀರ ಮೇಲಣ ಗುಳ್ಳೆ
ಹೇಳಿದರಲ್ಲವೆ ದಾಸರು
ನಿಜವಲ್ಲವೆಂದು

ಓಡದಿರು ಬೆಂಬತ್ತಿ
ಕಾಡುವುದು ಸೆಳೆಸೆಳೆದು
ಬಳಿಸಾರಿ ನೋಡೊಮ್ಮೆ
ಕೈಗಂತೂ ಸಿಗದು

ರಾತ್ರಿ ಕಂಡ ಕನಸನು
ಬೆಳಗೆದ್ದು ಕರೆದಂತೆ
ಮರುಳಾಗಬೇಡವೆ
ಕೂಸೆ ಅದು ನೋಡಲಷ್ಟೆ

ಹಾರಲಿ, ಎಷ್ಟಂತ ಹಾರೀತು
ದಾರಿಮಧ್ಯೆ ಉಸಿರೆಳೆಯುವ
ನಿತ್ರಾಣ ಅದಕೆ
ಬೆನ್ನಟ್ಟಬೇಡ ಜಾಣ ಮರಿಯೆ

ಸಣ್ಣದೊಂದು ಗಾಳಿಗೂ
ಅದೃಶ್ಯವಾಗುವ ಗುಳ್ಳೆ
ನಿನ್ನ ಅಂಗೈಯಲ್ಲಿ ಅರಳದಲ್ಲ
ಮತ್ತೇಕೆ ಶ್ರಮ, ಬಿಟ್ಟುಬಿಡು ತರಳೆ

**ಅನುಪಮಾ ವಸ್ತ್ರದ**

